ಎಲ್ಲಾ 1.50 ರೂ. ಹೋಗುತ್ತದೆ. ಇನ್ನು 11 ರೂ.ಗಳಲ್ಲಿ ಒಂದು ಟಿಫಿನ್ ಒಂದು ಊಟವನ್ನು ಕೊಡಲು ಸಾಧ್ಯವೇ? ಅದನ್ನು ತೂಕ ಮಾಡಿ ಆಹಾರ ಕೊಡುವಂತಹ ಪರಿಸ್ಥಿತಿಯನ್ನು ನೀವು ನಿರ್ಮಾಣ ಮಾಡುತ್ತೀರಾ, ಅಲ್ಲಿ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಲ್ಲಿ ಏನಾಗಿದೆಯೆಂದರೆ ಒಂದು ದಿವಸಕ್ಕೆ 15 ರೂ. ಗಳೆಂದರೆ, ಅವನು 13.20 ರೂಪಾಯಿಯನ್ನು ಬಳಸಬಹುದು. ಇವನು ಈ 13ರೂ. 20 ಪೈಸೆಯೆಂದರೆ ಆ ವಿದ್ಯಾರ್ಥಿ ಪ್ರೌಢನಾಗಿರುತ್ತಾನೆ, ಅವರಿಗೆ ಹೆಚ್ಚಿಗೆ ಆಹಾರ ಬೇಕಾಗುತ್ತದೆ. ಇಲ್ಲಿ ಇವನಿಗೆ ಈ 13ರೂ. 20 ಪೈಸೆಯಲ್ಲಿ ಎರಡು ಹೊತ್ತಿನ ಊಟವನ್ನು ಮತ್ತು ಆಹಾರವನ್ನು ಕೊಡಲು ಸಾಧ್ಯವೇ? ಇದನ್ನು ತಾವು ಆಲೋಚನೆಯನ್ನು ಮಾಡಬೇಕು. ಇದನ್ನು ತಿಂಗಳಿಗೆ 600 ರೂ. ಗಳು ಮತ್ತು 750ರೂ. ಗಳಿಗೆ ಹೆಚ್ಚು ಮಾಡಬೇಕೆಂದು ತಮಗೆ ತಿಳಿಸಲಿಚ್ಚಿಸುತ್ತೇನೆ. ನನಗೆ ಮಾತನಾಡಲು ಅವಕಾಶವನ್ನು ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

11. ಅಧ್ಯಕ್ಷರ ಅಪ್ಪಣೆ ಮೇರೆಗೆ.

ವಿಷಯ:– ಪ್ರಶ್ನೋತ್ತರ, ಗಮನಸೆಳೆಯುವ ಸೂಚನೆ, ನಿಯಮ 69ರ ಮೇರೆಗೆ ಚರ್ಚೆಯನ್ನು ತೆಗೆದುಕೊಳ್ಳುವ ಬಗ್ಗೆ.

ಶ್ರೀ ಎ.ಪಾಪರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು: ದಯಮಾಡಿ ಕೂಡಿ.

ಶ್ರೀ ಶಿವಾನಂದ ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ತಾವು ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೀರೋ ಇಲ್ಲವೊ, ಎಂಬುದು ಗೊತ್ತಾಗಲಿಲ್ಲ. ಹಿಂದಿನ ಪ್ರಶ್ನೆಗಳಿಗೂ ನಮಗೆ ಉತ್ತರ ಸಿಗಲಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಬೇಡಿಕೆಯ ಮೇಲಿನ ಚರ್ಚೆಯನ್ನು ನಾಳೆ ಮುಂದುವರೆಸಿ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ.

ಶ್ರೀ ಶಿವಾನಂದ ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಗಮನಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ, ಇದು ಒಂದು ದಿವಸವೂ ಬರದಿದ್ದರೆ ಹೇಗೆ?

ಅಧ್ಯಕ್ಷರು: ದಯಮಾಡಿ ಕೇಳಿ. ಈ ಬೇಡಿಕೆಗಳ ಮೇಲೆ 6ಗಂಟೆಯವರೆಗೂ ಚರ್ಚೆಯನ್ನು ಮಾಡಿ, 6ಗಂಟೆಯಿಂದ 7ಗಂಟೆಯವರೆಗೂ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ಆ ರೀತಿ

ಮಾಡದಿದ್ದರೆ ಆಗುವುದಿಲ್ಲ, ಇದು ಮುಗಿಯುವುದಿಲ್ಲ. ಇವತ್ತು ಬಹಳ ಲೇಟಾಗಿ ಸಭೆಯು ಪ್ರಾರಂಭವಾಗಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ನಮ್ಮದು ಗಮನ ಸೆಳೆಯುವ ಸೂಚನೆ, ನಿಯಮ 69ರ ಮೇಲೆ ಇರುವಂತಹ ವಿಷಯಗಳನ್ನು ತೆಗೆದುಕೊಂಡಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆ ಪ್ರತಿದಿವಸ ಬರುತ್ತಿದೆ. ಆದರೆ ಸಭೆ ಅಡ್ಜೆನ್ ಆಗುತ್ತದೆ.

ಶ್ರೀ ಜಿ.ಎ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾವು ನಿಯಮ 69ರ ಮೇಲೆ ಚರ್ಚೆ ಮಾಡಲು ಕೊಟ್ಟು ಎಷ್ಟು ದಿವಸಗಳಾಗಿವೆ, ಇದು ಒಂದು ವಾರದಿಂದ ಬರುತ್ತಿದೆ, ಹೋಗುತ್ತಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ದಿವಸಕ್ಕೆ ಒಂದೊಂದು ವಿಷಯಗಳನ್ನು ತೆಗೆದುಕೊಳ್ಳಿ, ಇಲ್ಲವೆಂದರೆ ಅಸೆಂಬ್ಲಿ ಬೋರ್ ಆಗುತ್ತದೆ.

ಶ್ರೀ ಶಿವಾನಂದ ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ನಮ್ಮದು ಏನೂ ತಕರಾರು ಇಲ್ಲ. ಇಲ್ಲಿ ಡಿಮ್ಯಾಂಡ್ಸ್ ಬಗ್ಗೆ ಡಿಟೈಲ್ ಆಗಿ ಚರ್ಚೆಯಾಗಬೇಕೆಂದು ಹೇಳಿ, ಈಗ ನಾಲ್ಕು ಡಿಮ್ಯಾಂಡ್ಸ್ ಇದೆ, ಇದಕ್ಕೆ ನಾಲ್ಕು ಜನರಿಗೆ ಮಾತನಾಡಲು ಅವಕಾಶವನ್ನು ಕೊಟ್ಟರೆ, ಸರಿಯಾಗುತ್ತದೆ. ಈಗ ತಾವು ಹೇಳಿದಂತೆ 6 ಗಂಟೆಯವರೆಗೂ ಚರ್ಚೆಯಾಗಲಿ, ಅನಂತರ ಪ್ರಶ್ನೋತ್ತರವನ್ನು ತೆಗೆದುಕೊಳ್ಳಬಹುದು.

ಅಧ್ಯಕ್ಷರು: ನಾನು ಅವಕಾಶವನ್ನು ಕೊಡುತ್ತೇನೆ, ಈಗ 6 ಗಂಟೆಯವರೆಗೆ ಚರ್ಚೆಯನ್ನು ತೆಗೆದುಕೊಳ್ಳೋಣ, ನಂತರ 6 ಗಂಟೆಯಿಂದ 7 ಗಂಟೆಯವರೆಗೂ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಈಗ ಗಮನ ಸೆಳೆಯುವ ಬಗ್ಗೆ ಏನು ಮಾಡುತ್ತೀರಾ?

ಅಧ್ಯಕ್ಷರು: ಗಮನ ಸೆಳೆಯುವ ಸೂಚನೆಗೆ ಐದು ನಿಮಿಷಗಳು ಬೇಕಾಗುತ್ತದೆ. ಅದನ್ನು ತೆಗೆದುಕೊಳ್ಳೋಣ.

ಶ್ರೀ ಕೆ.ಎಸ್. ಈಶ್ವರಪ್ಪ:–ಇದನ್ನು ಮುಗಿಸಿಬಿಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಇವು ನಿತ್ಯ ಅಜೆಂಡಾದಲ್ಲಿ ಬರುತ್ತವೆ. ಇದನ್ನು ಮುಗಿಸಿ ಬಿಡಿ.

ಅಧ್ಯಕ್ಷರು: ಈಗ ಚರ್ಚೆ ನಡೆಯಲಿ, ಅಂತಾ.....

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆ ಎರಡು ತೆಗೆದುಕೊಳ್ಳಿ.

ಅಧ್ಯಕ್ಷರು: ಈಗ ಪಿ.ಡಬ್ಲೂ.ಡಿ. ಮಿನಿಸ್ಟರ್ ಬಂದಿಲ್ಲವಲ್ಲಾ..

ಶ್ರೀ ಎಂ.ಪಿ.ವೆಂಕಟೇಶ: ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ.

ಶ್ರೀ ಶಿವಾನಂದ ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಮೊದಲು ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಿ.

ಅಧ್ಯಕ್ಷರು: ನನ್ನ ಮನವಿ ಏನೆಂದರೆ, ಇವತ್ತು ಬಹಳ ತಡವಾಗಿ ಸದನ ಆರಂಭವಾಯಿತು. ಆದುದರಿಂದ 6 ಗಂಟೆಯವರೆಗೆ ಬೇಡಿಕೆಯ ಮೇಲೆ ಚರ್ಚೆ ಆಗಲಿ, ಆನಂತರ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ, ಇದು 7 ಗಂಟೆಗೆ ಮುಗಿಯುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ಒಂದೋ, ಎರಡೋ ಗಮನ ಸೆಳೆಯುವ ಸೂಚನೆಯನ್ನು ಮುಗಿಸಬಹುದು.

ಅಧ್ಯಕ್ಷರು: ಗಮನ ಸೆಳೆಯುವ ಸೂಚನೆ ಎಂದರೆ ಅದಕ್ಕೆ ಸಂಬಂಧಪಟ್ಟಂತಹ ಮಂತ್ರಿಗಳು ಇಲ್ಲ.

ಶ್ರೀ ಶಿವಾನಂದ ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಅವರನ್ನು ಕರೆಸಿ. ನೀವು ಕರೆಸುವುದಿಲ್ಲವೆಂದರೆ, ನಾವು ಏನು ಮಾಡುವುದು?

ಶ್ರೀ ಎಂ.ಪಿ.ವೆಂಕಟೇಶ್: ಮಾನ್ಯ ಅಧ್ಯಕ್ಷರೇ, ಈಗ ಪ್ರಶ್ನೋತ್ತರ ಬಹಳ ಮುಖ್ಯವಾಗಿದೆ. ದಯಮಾಡಿ ಪ್ರಶ್ನೋತ್ತರಕ್ಕೆ ಅವಕಾಶವನ್ನು ಮಾಡಿಕೊಡಿ.

ಅಧ್ಯಕ್ಷರು: ಮಂತ್ರಿಗಳು ಇಲ್ಲವಲ್ಲಾ..

ಶ್ರೀ ಶಿವಾನಂದ ಎಸ್. ಪಾಟೀಲ್: ನೀವು ಅವರನ್ನು ಕರೆಸುವುದಿಲ್ಲ. ಇಲ್ಲಿ ಅವರು ಬರುತ್ತಾರೆ, ಹೋಗುತ್ತಾರೆ.

ಅಧ್ಯಕ್ಷರು: ಕರೆಸುತ್ತೇನೆ. ಈಗ ಶ್ರೀ ಹೆಚ್.ಆಂಜನೇಯನವರು ಮಾತನಾಡಲಿ. ಅಷ್ಟರಲ್ಲಿ ಮಂತ್ರಿಯವರನ್ನು ಕರೆಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೇ, ಈಗ ಆ ಕಡೆ ಮಾತನಾಡಿದ್ದಾರೆ. ಈಗ ಈ ಕಡೆ ಮಾತನಾಡಲು ಅವಕಾಶವನ್ನು ಕೊಡಿ.

ಅಧ್ಯಕ್ಷರು; ಈಗ ವಿರೋಧಪಕ್ಷದ ಕಡೆಗೆ ಹೆಚ್ಚಿಗೆ ಮಾತನಾಡಲು ಅವಕಾಶ ಇದೆ. ನಿಮ್ಮ ಕಡೆಗೆ ಅಲಾಟ್ ಮಾಡಿರುವಂತಹ ಸಮಯವನ್ನು

ಮಂತ್ರಿಗಳು ಉತ್ತರವನ್ನು ಕೊಡುವುದಕ್ಕೆ ತೆಗೆದುಕೊಳ್ಳುತ್ತಾರೆ. ನಿಮಗೆ ಯಾರಾದರೂ ಒಬ್ಬರಿಗೆ, ಇಬ್ಬರಿಗೆ ಅವಕಾಶವನ್ನು ಕೊಡಬೇಕಾಗುತ್ತದೆ. ನಾನು ಅವಕಾಶವನ್ನು ಕೊಡುತ್ತೇನೆ. ತಾವು ಕುಳಿತುಕೊಳ್ಳಿ.

12. ವಿತ್ತೀಯ ಕಾರ್ಯಕಲಾಪ.

(ಅ) 2005–06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ.

(ಬೇಡಿಕೆಗಳ ಸಂಖ್ಯೆ 9,18,6,16 ಮತ್ತು 10)

ಶ್ರೀ ಹೆಚ್.ಆಂಜನೇಯ (ಭರಮಸಾಗರ): ಮಾನ್ಯ ಅಧ್ಯಕ್ಷರೇ, ನಾನು ಸಮಾಜ ಕಲ್ಯಾಣ ಇಲಾಖೆಯ ಮೇಲೆ ಮಾತನಾಡಬೇಕೆಂದು ಇಚ್ಛೆಪಟ್ಟಿದ್ದೆ. ಅದರ ಪ್ರಕಾರ ನಾನು ನೋಟ್ಸ್ ಅನ್ನು ರೆಡಿ ಮಾಡಿ ಇಟ್ಟುಕೊಂಡಿದ್ದೆ. ನನಗೆ ಮಾತನಾಡಲು ನಾಳೆ ಅವಕಾಶ ಸಿಗಬಹುದೆಂದು ಅಂದುಕೊಂಡು, ಆ ನೋಟ್ಸ್ ಎಲ್ಲವನ್ನೂ ಬಿಟ್ಟು ಬಂದೆ. ಆದರೂ ತಾವು ಈಗ ಮಾತನಾಡಲು ನನ್ನನ್ನು ಕರೆದಿದ್ದೀರಿ. ತಾವು ಬಹಳ ಅಭಿಮಾನದಿಂದ ನನ್ನ ಹೆಸರನ್ನು ಕರೆದಿರುವುದರಿಂದ ನಾನು ಈಗ ಮಾತನಾಡಲು ಇಚ್ಛೆಪಡುತ್ತಿದ್ದೇನೆ. ಈಗ ಸಮಾಜ ಕಲ್ಯಾಣ ಇಲಾಖೆ, ಸಮಾಜದಲ್ಲಿರುವಂತಹ ಅತ್ಯಂತ ಅಸಂಘಟಿತ, ಮತ್ತು ತುಳಿತಕ್ಕೊಳಗಾಗಿರುವಂತಹ ಅಸ್ಪೃಶ್ಯರ ಕಲ್ಯಾಣಕ್ಕಾಗಿ ಇರುವಂತಹ ಒಂದು ಬಹಳ ಪವಿತ್ರವಾದಂತಹ ಸಂಸ್ಥೆ, ಈ ಸಮಾಜ ಕಲ್ಯಾಣ ಇಲಾಖೆ. ಈ ಸಮಾಜ ಕಲ್ಯಾಣ ಇಲಾಖೆ ಮನಸ್ಸು ಮಾಡಿದರೆ ಇನ್ನು 10 ವರ್ಷಗಳಲ್ಲಿ ಈ ಅಸ್ಪೃಶ್ಯತೆಯನ್ನು ನಿವಾರಣೆಯನ್ನು ಮಾಡಬಹುದು, ಬಡತನವನ್ನು ನಿರ್ಮೂಲನೆ ಮಾಡಬಹುದು ಮತ್ತು ಈ ಅಸಂಘಟಿತ ಜನರು ಮತ್ತು ಶೋಷಿತ ಜನರು ಯಾರು ಇದ್ದಾರೆ, ಅಂಥವರನ್ನು ಕಲ್ಯಾಣ ಮಾಡಿ ರಾಷ್ಟ್ರದ ಮುಖ್ಯವಾಹಿನಿಯಲ್ಲಿ ತರಬಹುದು. ಅಂತಹ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಇಲ್ಲಿಯವರೆಗೂ ಆ ಜನರು ಎಲ್ಲಿ ಇದ್ದಾರೊ, ಅಲ್ಲೇ ಇದ್ದಾರೆ. ಅವರಿಗೆ ಘೋಷಣೆಯಾಗುವಂತಹ ಎಲ್ಲಾ ಕಾರ್ಯಕ್ರಮಗಳು ಮಧ್ಯವರ್ತಿಗಳ ಪಾಲಾಗುತ್ತಿದೆಯೇ ಹೊರತು ಅವರಿಗೆ ನೇರವಾಗಿ, ಸುಲಭವಾಗಿ ಅವರಿಗೆ ನೈಜ ಫಲಾನುಭವಿಗಳಿಗೆ ಅದು ಸಿಗದೇ ಅವರು ಇವತ್ತಿನ ದಿವಸ ವಂಚಿತರಾಗಿದ್ದಾರೆಂಬುದನ್ನು ಬಹಳ ನೋವಿನಿಂದ ಇಲ್ಲಿ ಹೇಳಲಿಚ್ಛಿಸುತ್ತೇನೆ. ಇಲ್ಲಿ ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಇದ್ದಾರೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪನೆಯನ್ನು ಮಾಡಿ 20 ವರ್ಷಗಳು ಆಗಿವೆ. ಈ 20 ವರ್ಷಗಳ ಹಿಂದೆ